# ಪರಿಶಿಷ್ಟ ಜಾತಿಯ ಕೃಷಿ ಕಾರ್ಮಿಕ ಮಹಿಳೆಯರ ಮಾಧ್ಯಮ ಬಳಕೆ ಕುರಿತು ಒಂದು ಅಧ್ಯಯನ

ವರ್ಣಶ್ರೀ ಆರ್.[1] & ವರ್ಗೀಸ್ ಪಿ.ಎ.[2]

[1]ಸಂಶೋಧನಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.

[2]ಮಾರ್ಗದರ್ಶಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.

DOI: https://doi.org/10.5281/zenodo.17013731

## ABSTRACT:

ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಗಮನಾರ್ಹವಾಗಿದೆ. ಆದರೂ ಆಕೆ ವೇತನ ತಾರತಮ್ಯ ಎದುರಿಸುತ್ತಿದ್ದಾಳೆ. ಎರಡನೇ ದರ್ಜೆ ಎಂದು ಕರೆಯಲ್ಪಡುವ ಮಹಿಳೆಯರು ಅನೇಕ ಕಾರಣಗಳಿಂದ ಅವಕಾಶ ವಂಚಿತರಾಗಿದ್ದಾರೆ, ಅದರಲ್ಲಿ ಜಾತಿ ಹಿನ್ನೆಲೆಯೂ ಒಂದು. ಇವುಗಳ ನಿರ್ಮೂಲನೆಗಾಗಿ ಸರ್ಕಾರಗಳು ಮಹಿಳಾ ಸಬಲೀಕರಣಕ್ಕಾಗಿ ಹಾಗೂ ಕೃಷಿ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ಇಂತಹ ವಿಷಯಗಳನ್ನು ತಿಳಿಸಲು ಮತ್ತು ತಿಳಿಯಲು ಮಾಧ್ಯಮ ಪೂರಕವಾಗಿ ಕಾರ್ಯನಿರ್ವಹಿಸಬಹುದು. ಪ್ರಜಾಪ್ರಭುತ್ವದ ನಾಲ್ಕನೆ ಅಂಗ ಎನಿಸಿಕೊಂಡಿರುವ ಮಾಧ್ಯಮದ ಮುಖ್ಯ ಉದ್ದೇಶ ಮಾಹಿತಿ, ಶಿಕ್ಷಣ ಮತ್ತು ಮನರಂಜನೆ. ಇವುಗಳನ್ನು ಮುದ್ರಣ ಮಾಧ್ಯಮ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಾದ ರೇಡಿಯೋ ಹಾಗೂ ಟೆಲಿವಿಷನ್ ಕಾರ್ಯಕ್ರಮಗಳ ಮೂಲಕ ಪ್ರಸಾರ ಮಾಡುತ್ತಿದೆ. ಮಹಿಳೆಯರಿಗಾಗಿ ಮುದ್ರಣ ಮಾಧ್ಯಮದಲ್ಲಿ ಪುರವಣಿಗಳು, ರೇಡಿಯೋ ಮತ್ತು ಟೆಲಿವಿಷನ್‌ನಲ್ಲಿ ಮಹಿಳೆಯರಿಗಾಗಿ ಆರೋಗ್ಯ, ಅಡುಗೆ, ಕಸೂತಿಗೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದರೂ, ಮಹಿಳೆಯರಲ್ಲಿ ಅವುಗಳ ಬಳಕೆ ತಿಳಿಯುವುದು ಅಗತ್ಯವಾಗಿದೆ. ಮಾಧ್ಯಮಗಳ ಬಳಕೆ ಮತ್ತು ಗ್ರಾಮೀಣ ಪ್ರದೇಶದ ಮಹಿಳೆಯರ ಮೇಲೆ ಮಾಧ್ಯಮ ಬೀರಿರಬಹುದಾದ ಪ್ರಭಾವಗಳನ್ನು ಅರಿಯುವ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯ ಕೃಷಿ ಕೂಲಿ ಕಾರ್ಮಿಕ ಮಹಿಳೆಯರ ಆರ್ಥಿಕ ಒಡೆತನ, ರೈತ ಸಂಘಟನೆಗಳಲ್ಲಿ ಪಾಲ್ಗೊಳ್ಳುವಿಕೆ ಮತ್ತು ಮಾಧ್ಯಮ ಬಳಕೆಯ ಉದ್ದೇಶವನ್ನು ತಿಳಿಯುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಪ್ರಶ್ನಾವಳಿಯ ಸಹಾಯದಿಂದ ದತ್ತಾಂಶ ಸಂಗ್ರಹಿಸಿ ಪರಿಮಾಣಾತ್ಮಕ ವಿಷಯ ವಿಶ್ಲೇಷಣಾ ವಿಧಾನವನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ದತ್ತಾಂಶಗಳ ಮೂಲಕ ಪರಿಶಿಷ್ಟ ಜಾತಿಯ ಕೂಲಿ ಕಾರ್ಮಿಕರು ಪುರುಷರಷ್ಟು ಮನೆ ಮತ್ತು ಜಮೀನಿನ ಯಜಮಾನಿಕೆಯನ್ನು ಪಡೆದಿಲ್ಲ ಹಾಗೂ ಇವರು ಅಸಂಘಟಿತರಾಗಿರುವುದು, ಸರ್ಕಾರದ ಕೃಷಿ ಯೋಜನೆಗಳ ಅರಿವು

ತಲುಪದೆ ಇರುವುದು ತಿಳಿದುಬಂದಿದೆ. ಹಾಗೆಯೇ, ಮಾಧ್ಯಮಗಳನ್ನು ಹೆಚ್ಚಾಗಿ ಮನರಂಜನೆಯ ಮೂಲವಾಗಿ ಬಳಸುತ್ತಿರುವುದು ಕಂಡುಬಂದಿದೆ.

**KEYWORDS:**

ಪರಿಶಿಷ್ಟ ಜಾತಿ, ಕೃಷಿ ಮಹಿಳೆಯರು, ಆರ್ಥಿಕ ಸಬಲೀಕರಣ, ಮಾಧ್ಯಮ ಬಳಕೆ.

**ಪೀಠಿಕೆ:**

ಭಾರತ ಸಂವಿಧಾನ ಶಿಲ್ಪಿ ಮಹಿಳೆಯರ ಕುರಿತು ಒಂದು ಮಾತು ಹೇಳುತ್ತಾರೆ: 'ಒಂದು ದೇಶದ ಅಭಿವೃದ್ಧಿಯ ಗುಣಮಟ್ಟ ತಿಳಿಯಬೇಕಾದರೆ ಅದನ್ನು ಆ ದೇಶದ ಮಹಿಳೆಯರ ಸ್ಥಿತಿ, ಸ್ಥಾನಮಾನ ಗಮನಿಸಿದರೆ ತಿಳಿಯುತ್ತದೆ' ಎನ್ನುತ್ತಾರೆ. ಇದು ಮಹಿಳೆಯರ ಸಬಲೀಕರಣವಾದರೆ ದೇಶದ ಅಭಿವೃದ್ಧಿಯಾದಂತೆ ಎಂಬುದನ್ನು ತಿಳಿಸುತ್ತದೆ (ಸಿಂಗಾರಿಯಾ, 2014).

ಭಾರತವು ಹಳ್ಳಿಗಳ ರಾಷ್ಟ್ರ ಹಾಗೆಯೇ ಅನೇಕ ಬುಡಕಟ್ಟುಗಳ ಆಶ್ರಯತಾಣವೂ ಹೌದು. ಪ್ರಾಚೀನ ಕಾಲದಿಂದಲೂ ಅಂತಸ್ತು ಹಾಗೂ ವೃತ್ತಿಗೆ ಅನುಗುಣವಾಗಿ ಕೆಲವು ಜಾತಿಗಳು ಕೆಳವರ್ಗವೆಂದು, ಇನ್ನು ಕೆಲವು ಬುಡಕಟ್ಟು ಸಮುದಾಯಗಳೆಂದು ಕರೆಯಲ್ಪಡುತ್ತಿವೆ. ಅಂತಹವುಗಳಲ್ಲಿ ಕರ್ನಾಟಕದ ಆದಿಕರ್ನಾಟಕ, ಆದಿಭೋವಿ ಮತ್ತು ಲಂಬಾಣಿ ಸಮುದಾಯಗಳು ಸೇರಿವೆ (ವಿಜಯಾ ದಬ್ಬೆ, 1989).

ಕೃಷಿ ಸಂವಹನವು ಬಡತನ, ನಿರುದ್ಯೋಗ, ಹಸಿವು, ಅಪೌಷ್ಟಿಕತೆ ಮೊದಲಾದ ಸಮಸ್ಯೆಗಳನ್ನು ನಿವಾರಿಸಿ ಕೃಷಿಕರಲ್ಲಿ ಸ್ವಾಭಿಮಾನ ಮತ್ತು ಸ್ವಾವಲಂಬನೆಗಳನ್ನು ಮೂಡಿಸುವ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿದೆ. ಸಂವಹನ ಮಾಧ್ಯಮಗಳು ಕೂಡ ವಿವಿಧ ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ದೇಶದ ಎಲ್ಲೆಡೆ ಜನಪ್ರಿಯಗೊಳಿಸಿ ಕೃಷಿಕರನ್ನು ಪರಿವರ್ತನೆ ಮತ್ತು ಪ್ರಗತಿಗಳೆಡೆಗೆ ಮುನ್ನಡೆಸುವ ಜವಾಬ್ದಾರಿ ಹೊಂದಿದೆ (ಮಹೇಶಚಂದ್ರ ಗುರು, 2014).

**ಸಾಹಿತ್ಯ ವಿಮರ್ಶೆ:**

ಪವಿತ್ರರವರು 'ಮಹಿಳಾ ಸಬಲೀಕರಣದಲ್ಲಿ ಕರ್ನಾಟಕ ಸರ್ಕಾರದ ಯೋಜನೆಗಳ ಹಿನ್ನೆಲೆಯಲ್ಲಿ' ಎಂಬ ಪುಸ್ತಕದಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ರೂಪಿಸಿರುವ ಯೋಜನೆಗಳನ್ನು ತಿಳಿಸುತ್ತ, ಯೋಜನೆಗಳ ಅರಿವಿಗಾಗಿ ಇಲಾಖಾ ಅಧಿಕಾರಗಳು ಜಾಹೀರಾತು, ಜಾಥ ಹಾಗೂ ಮಾಧ್ಯಮಗಳನ್ನು ಬಳಸಿರುವುದಾಗಿ ತಿಳಿಸಿದ್ದಾರೆ. ಆದರೆ ಸಂದರ್ಶನದ ವೇಳೆ ಅಂಗನವಾಡಿ

ಕಾರ್ಯಕರ್ತರಿಂದ ಶೇ. 50 ರಷ್ಟು ಮತ್ತು ಆಶಾ ಕಾರ್ಯಕರ್ತರಿಂದ ಶೇ. 20.75 ರಷ್ಟು ಹೆಚ್ಚಿನ ಮಾಹಿತಿ ದೊರೆತಿದೆ ಆದರೆ ಕೇವಲ ಶೇ 18 ರಷ್ಟು ಮಂದಿಗೆ ಯೋಜನೆಗಳ ಅರಿವು ಸಮೂಹ ಮಾಧ್ಯಮದಿಂದ ದೊರೆತಿರುವುದನ್ನು ಗುರುತಿಸಿದ್ದಾರೆ. ಹೀಗೆ ಮಾಹಿತಿ ಅರಿವಿನ ಕೊರತೆಯಿಂದ ಗ್ರಾಮ ಪಂಚಾಯಿತಿ ಹಾಗೂ ಉಳ್ಳವರ ಸೊತ್ತಾಗಿ ಯೋಜನೆಗಳು ಅವರ ಪಾಲಾಗುತ್ತಿವೆ. ಇದರಿಂದ ಮಹಿಳಾ ಸಬಲೀಕರಣ ಯೋಜನೆಗಳು ಯೋಜಿತ ರೀತಿಯಲ್ಲಿ ಸಾಧ್ಯವಾಗುತ್ತಿಲ್ಲ ಎಂಬುದನ್ನು ತಿಳಿಸಿದ್ದಾರೆ (2019).

ಗ್ರಾಮೀಣ ಪ್ರದೇಶದ ಮಹಿಳೆಯರ ಸಾಮಾಜಿಕ, ಆರ್ಥಿಕ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ರಾಜ್ಯಗಳು ಹಲವಾರು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತಿವೆ. ಸ್ತ್ರೀಯರನ್ನು ಚಿಕ್ಕ ಸಮೂಹಗಳಲ್ಲಿ ಸಂಘಟಿಸಿ ಅವರಲ್ಲಿ ಉಳಿತಾಯ ಮನೋಭಾವವನ್ನು ಪ್ರೇರೇಪಿಸುವುದರೊಂದಿಗೆ ತಮ್ಮ ದಿನನಿತ್ಯದ ಬೇಡಿಕೆಗಳನ್ನು ತಾವೇ ಈಡೇರಿಸಿಕೊಳ್ಳುವಷ್ಟು ಶಕ್ತರಾಗಿದ್ದಾರೆ. ಇದಕ್ಕೆ ಸ್ತ್ರೀ ಶಕ್ತಿಯು ಸಹಾಯಕವಾಗಿದೆ. ಇದರ ಉದ್ದೇಶ ಸ್ವಾವಲಂಬನೆ, ಉಳಿತಾಯ, ಸಾಕ್ಷರತೆ ಮತ್ತು ಸಾಮಾಜಿಕ ಒಡನಾಟ. ಇದು ಗ್ರಾಮೀಣ ಮಹಿಳೆಯರ ಸಂಪದಭಿವೃದ್ಧಿಗೆ ಸಹಾಯಕವಾಗಿದೆ (ಚಂದ್ರಶೇಖರ್, 2015).

ಸಮೂಹ ಮಾಧ್ಯಮಗಳು ಬಹಳವಾಗಿ ಸಾರ್ವತ್ರಿಕ ಸಂದೇಶಗಳನ್ನು ಪ್ರಸಾರ ಮಾಡುತ್ತವೆ. ಇದರಿಂದಾಗಿ ಎಲ್ಲರನ್ನು ತಲುಪುವಲ್ಲಿ ತಡೆಗೋಡೆ ನಿರ್ಮಾಣವಾಗುತ್ತದೆ. ಇಲ್ಲಿನ ಬಹುಪಾಲು ಸಂದೇಶಗಳು ಹೆಚ್ಚಿನ ಜನರಿಗೆ ಸಂಬಂಧಿಸಿರುವುದಿಲ್ಲ. ಹೀಗಾಗಿ ಜನರು ಈ ಸಂದೇಶಗಳನ್ನು ಅಲಕ್ಷ್ಯ ಮಾಡುತ್ತಾರೆ. ಅಭಿವೃದ್ಧಿ ಯೋಜನೆಯೊಂದರಲ್ಲಿ ಜನರ ಭಾಗವಹಿಸುವಿಕೆ ಕುರಿತಾಗಿ ಪರಿಪೂರ್ಣ ಫಲಿತಾಂಶಕ್ಕಾಗಿ ಕಾಯಲು ಸಮೂಹ ಮಾಧ್ಯಮಗಳಿಗೆ ವ್ಯವಧಾನವಿರುವುದಿಲ್ಲ. ಹೀಗೆ ಪರಸ್ಪರ ವಿಚಾರ ವಿನಿಮಯ ಸಮೂಹ ಮಾಧ್ಯಮಗಳಿಂದಾಗದು (ಮುನಿಯಪ್ಪ, 2012).

ಅನಿತಾ ಮತ್ತು ಮುರಳಿ (2017) ಅವರು ತಮ್ಮ ಅಧ್ಯಯನದಲ್ಲಿ, ಮಹಿಳಾ ವಿಷಯಗಳು ವರದಿಯಾಗುತ್ತಿವೆಯಾದರು, ಅವುಗಳು ಕೇವಲ ಸಂದರ್ಭ ಆಧಾರಿತ ಅಥವಾ ಕಾರ್ಯಕ್ರಮ ಆಧಾರಿತ (ಇವೆಂಟ್ ಬೇಸ್ಡ್) ಸುದ್ದಿಯಾಗಿರುತ್ತವೆ. ಸುದ್ದಿಗಳಿದ್ದರೂ ಸಂಪಾದಕೀಯದಲ್ಲಿ ಅವು ಕಾಣಸಿಗುವುದಿಲ್ಲ. ಮಹಿಳೆಯು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವವಳಾದರೂ, ಅವುಗಳ ನಿರಂತರ ವರದಿಗಾರಿಕೆ ಸಿಗುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ.

ಮಹಿಳಾ ಸಂಬಂಧಿ ವಿಷಯಗಳು ಪತ್ರಿಕೆಗಳಲ್ಲಿ ಬಂದರೂ, ಹೆಚ್ಚಾಗಿ ಅತ್ಯಾಚಾರ, ಕೊಲೆ, ಆತ್ಮಹತ್ಯೆಯಂತಹ ವಿಷಯಗಳಿಂದ ಕೂಡಿರುತ್ತದೆ ಹೊರತು

ಮಹಿಳೆಯರ ಜೀವನ ಕ್ರಮ, ಕಷ್ಟಗಳು, ಸಂಘಟನೆಗಳ ಬಗ್ಗೆ ಬೆಳಕು ಚೆಲ್ಲುವುದಿಲ್ಲ ಎಂಬುದಾಗಿ ತಿಳಿಸುತ್ತ, ಇವುಗಳಿಗೆ ಸಂಪ್ರದಾಯದ ಹಾಗೂ ಸಮಂಜಸವಲ್ಲದ ನ್ಯಾಯ ಕಾರಣ ಎನ್ನುತ್ತಾರೆ (ಜೋಶಿ, 1999).

ಮೇಲಿನ ಸಾಹಿತ್ಯ ವಿಮರ್ಶೆಗಳಿಂದ, ಮಾಧ್ಯಮ ಅದರಲ್ಲೂ ಪತ್ರಿಕೆಗಳು ಹೆಚ್ಚಾಗಿ ಮಹಿಳೆಯರ ಸಮಸ್ಯೆಗಳನ್ನು ಪರಿಗಣಿಸುತ್ತಿಲ್ಲ ಎಂಬುದು ತಿಳಿದು ಬಂದಿದೆ. ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಮಾಧ್ಯಮಗಳು ಮಾಹಿತಿಯ ಮೂಲವಾಗಿ ಪ್ರಭಾವ ಬೀರದಿರುವುದು ಕಂಡುಬಂದಿದೆ.

**ಅಧ್ಯಯನ ವಿಧಾನ ಉದ್ದೇಶಗಳು:**

**ಸಾಮಾನ್ಯ ಉದ್ದೇಶ:**

» ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯ ಕೃಷಿ ಕೂಲಿ ಕಾರ್ಮಿಕರಾಗಿರುವ ಮಹಿಳೆಯರ ಮಾಧ್ಯಮ ಬಳಕೆಯನ್ನು ತಿಳಿಯುವುದಾಗಿದೆ.

**ನಿರ್ದಿಷ್ಟ ಉದ್ದೇಶ:**

» ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯ ಕೃಷಿ ಕೂಲಿಕಾರ್ಮಿಕ ಮಹಿಳೆಯರ ಭೂ ಒಡೆತನ ಮತ್ತು ರೈತ ಸಂಘಟನೆಯ ಪಾಲ್ಗೊಳ್ಳುವಿಕೆಯನ್ನು ತಿಳಿಯುವುದು.

» ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯ ಕೃಷಿ ಕೂಲಿ ಕಾರ್ಮಿಕ ಮಹಿಳೆಯರ ಕೃಷಿ ಅಭಿವೃದ್ಧಿ ಯೋಜನೆಗಳ ಮಾಹಿತಿ ಮೂಲ ಅರಿಯುವುದು.

» ಪರಿಶಿಷ್ಟ ಜಾತಿಯ ಕೃಷಿ ಕೂಲಿ ಕಾರ್ಮಿಕ ಮಹಿಳೆಯರ ಮಾಧ್ಯಮ ಬಳಕೆಯ ಉದ್ದೇಶವನ್ನು ಗುರುತಿಸುವುದು.

**ಅಧ್ಯಯನ ವಿಧಾನ:**

ಈ ಅಧ್ಯಯನದಲ್ಲಿ ಸಂದರ್ಶನ ವಿಧಾನವನ್ನು ಬಳಸಿಕೊಳ್ಳಲಾಗಿದ್ದು, ಭದ್ರಾವತಿ ತಾಲ್ಲೂಕಿನ ಬಿಳಿಕಿ, ನವಿಲೆಬಸವಾಪುರ, ಪದ್ಮೇನಹಳ್ಳಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಮೂರು ಹಳ್ಳಿಗಳಲ್ಲಿ ಬಿಳಿಕಿಯಲ್ಲಿ ಆದಿಕರ್ನಾಟಕ, ನವಿಲೆಬಸವಾಪುರದಲ್ಲಿ ಆದಿಭೋವಿ, ಪದ್ಮೇನಹಳ್ಳಿಯಲ್ಲಿ ಲಂಬಾಣಿ ಸಮುದಾಯಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಪ್ರತಿ ಹಳ್ಳಿಗಳಿಂದಲೂ ತಲಾ 10 ಮಂದಿಯನ್ನು ಸರಳ ಯಾದೃಚ್ಛಿಕ ವಿಧಾನದಿಂದ ನಮೂನೆಯನ್ನು ತೆಗೆದುಕೊಳ್ಳಲಾಗಿದೆ.

ಪ್ರಶ್ನಾವಳಿಯನ್ನು ರಚಿಸಿ ಶೈಕ್ಷಣಿಕ ಸ್ಥಿತಿ, ಭೂ ಮಾಲೀಕತ್ವ, ಮನೆಯ

ಯಜಮಾನಿಕೆ, ಮಾಧ್ಯಮಗಳ ಬಳಕೆಯ ಮಾಹಿತಿ, ರೈತ ಸಂಘಟನೆಗಳಲ್ಲಿನ ಪಾಲ್ಗೊಳ್ಳುವಿಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲಾಗಿದ್ದು, ಪರಿಮಾಣಾತ್ಮಕ ವಿಧಾನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ.


**ದತ್ತಾಂಶ ಸಂಗ್ರಹ ವಿಶ್ಲೇಷಣೆ**

ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದುವುದು ಮುಖ್ಯವಾಗಿದೆ. ಅಧ್ಯಯನದ ದತ್ತಾಂಶ ಸಂಗ್ರಹಣೆಗೆ ಆಯ್ದ ನಮೂನೆಯಲ್ಲಿ ಪರಿಶಿಷ್ಟ ಜಾತಿಯ ಕೃಷಿ ಕಾರ್ಮಿಕ ಮಹಿಳೆಯರಲ್ಲಿ 30 ರಿಂದ 50ರ ವಯೋಮಾನದವರಿಂದ ಮಾಹಿತಿ ಪಡೆಯಲಾಗಿದೆ. ಇವರುಗಳಲ್ಲಿ ಅನಕ್ಷರಸ್ಥರು (8), ಪ್ರಾಥಮಿಕ ಶಾಲಾ ಹಂತ(17) ಹಾಗೂ ಪ್ರೌಢ ಶಾಲಾ ಹಂತ(4) ಮತ್ತು ಪಿಯುಸಿ (1) ವಿದ್ಯಾರ್ಹತೆ ಹೊಂದಿರುವುದಾಗಿ ಪ್ರತಿಕ್ರಿಯಿಸಿದ್ದಾರೆ.

**ಉದ್ದೇಶ 1–** ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯ ಕೃಷಿ ಕೂಲಿಕಾರ್ಮಿಕ ಮಹಿಳೆಯರ ಭೂ ಒಡೆತನ ಮತ್ತು ರೈತ ಸಂಘಟನೆಯ ಪಾಲ್ಗೊಳ್ಳುವಿಕೆಯನ್ನು ತಿಳಿಯುವುದು.


ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಮನೆಯ ಯಜಮಾನಿಕೆ, ಭೂ ಒಡೆತನ ಮತ್ತು ರೈತ ಸಂಘಟನೆಯಲ್ಲಿ ಅವರ ಪಾಲ್ಗೊಳ್ಳುವಿಕೆಯು ಅವರ ಆರ್ಥಿಕ ಸಬಲೀಕರಣ ಮತ್ತು ಸಾಮಾಜಿಕವಾಗಿ ಪಾಲ್ಗೊಳ್ಳುವಿಕೆ ಗುಣಗಳು ಅವರನ್ನು ಶಕ್ತರಾಗಿಸುವಲ್ಲಿ ಪೂರಕವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಇವುಗಳನ್ನು ತಿಳಿಯಲಾಗಿದೆ.

**ಪೈ ನಕ್ಷೆ–1: ಸಂದರ್ಶಿತರ ಮನೆಯ ಯಜಮಾನಿಕೆಯ ವಿವರ:**




ಸಂದರ್ಶಿತರಲ್ಲಿ ಮನೆಯ ಒಡೆತನ ಶೇ. 43.3 ರಷ್ಟು ಗಂಡನದ್ದಾಗಿದೆ. ಸ್ವಯಂ ಯಜಮಾನಿಕೆ ಕೇವಲ ಶೇ.30 ರಷ್ಟಿದ್ದು, ಉಳಿದಂತೆ ಮಗ, ಮಾವ, ಅತ್ತೆ, ಮೈದುನನ ಒಡೆತನದಲ್ಲಿ ಶೇ. 26.67 ರಷ್ಟಿದೆ.

**ಸ್ವಂತ ಜಮೀನಿನ ವಿವರ:**




ಸಂದರ್ಶಿತ ಪರಿಶಿಷ್ಟ ಜಾತಿಯ ಮಹಿಳೆಯರಲ್ಲಿ ಶೇ 56. 67 ಮಂದಿ ಸ್ವಂತ ಜಮೀನು ಹೊಂದಿದ್ದು, ಉಳಿದ ಶೇ. 43.33 ರಷ್ಟು ಮಂದಿ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವರಲ್ಲಿ 3 ಮಂದಿ ಮಹಿಳೆಯರ ಹೆಸರಲ್ಲಿ ಜಮೀನು ಇದ್ದು, ಉಳಿದ ಸಂದರ್ಶಿತರ ಸ್ವಂತ ಜಮೀನು ಗಂಡ ಹಾಗೂ ಇತರರ ಹೆಸರಿನಲ್ಲಿ ಇದೆ.

ಸಂದರ್ಶಿತರಲ್ಲಿ ಶೇ. 100 ರಷ್ಟು ಮಂದಿ ನಾವು ಕೃಷಿ ಸಂಘಟನೆಗಳಲ್ಲಿ ಭಾಗಿಯಾಗಿಲ್ಲ ಎಂದು ತಿಳಿಸಿದ್ದಾರೆ. ಇದು ಅವರು ಕೃಷಿ ಮಹಿಳೆಯರು ಅಸಂಘಟಿತರಾಗಿರುವುದನ್ನು ತಿಳಿಸುತ್ತದೆ.

**ಉದ್ದೇಶ 2:** ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯ ಕೃಷಿ ಕೂಲಿಕಾರ್ಮಿಕ ಮಹಿಳೆಯರ ಕೃಷಿ ಅಭಿವೃದ್ಧಿ ಯೋಜನೆಗಳ ಅರಿವಿನ ಮೂಲ ಅರಿಯುವುದು.


ಸರ್ಕಾರ ಕೃಷಿ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ನೀಡಿದೆ. ಅವುಗಳ ಅರಿವು ಇದ್ದರೆ ಅದರ ಫಲಾನುಭವಿಗಳಾಗಿ ಆರ್ಥಿಕ ಸಬಲೀಕರಣ ಹೊಂದಬಹುದು ಹಾಗೂ ಅವುಗಳ ಮೂಲದಿಂದ ಯೋಜನೆಗಳ ಪ್ರಚಾರ ಕಾರ್ಯ ಉತ್ತಮವಾಗಿದೆಯೇ ಎನ್ನುವುದನ್ನು ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಈ ಉದ್ದೇಶವನ್ನು ಅಧ್ಯಯನ ಮಾಡಲಾಗಿದೆ.

**ಕೋಷ್ಟಕ–1: ಕೃಷಿ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳ ಅರಿವು**

| ಕ್ರಮ ಸಂಖ್ಯೆ | ಸರ್ಕಾರದ ಯೋಜನೆಗಳ ಅರಿವು | ಒಟ್ಟು |
|---|---|---|
| 1 | ಹೌದು | 10 (33.3%) |
| 2 | ಇಲ್ಲ | 20 (66.7%) |
| | ಒಟ್ಟು | 30 |

ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರಿಗೆ ಸರ್ಕಾರದ ಯೋಜನೆಯ ಮಾಹಿತಿ ಅರಿವು ಶೇ.66.7 ಮಂದಿಗೆ ಇಲ್ಲದಿರುವುದು ಕಂಡುಬಂದಿದೆ. ಉಳಿದ ಶೇ. 33.3 ಮಂದಿಗೆ ಅವುಗಳ ಅರಿವಿದ್ದು, ನೆರೆಹೊರೆ ಮತ್ತು ಗಂಡನಿಂದ ತಿಳಿದಿದೆಯಾದರೂ ಅವುಗಳಲ್ಲಿ ಸ್ವಯಂ ಭಾಗಿಯಾಗಿಲ್ಲದಿರುವುದನ್ನು ತಿಳಿಸಿದ್ದಾರೆ.

**ಪೈ ನಕ್ಷೆ –3: ಸರ್ಕಾರದ ಕೃಷಿ ಯೋಜನೆಗಳ ಮಾಹಿತಿಯ ಮೂಲ**





ಈ ಕೃಷಿ ಕಾರ್ಮಿಕ ಮಹಿಳೆಯರು ಸರ್ಕಾರದ ಕೃಷಿ ಯೋಜನೆಗಳನ್ನು ಹೆಚ್ಚು (50%) ಮಂದಿ ನೆರೆಹೊರೆಯಿಂದ, ಹಾಗೂ ಶೇ.20% ರಷ್ಟು ಸಂದರ್ಶಿತರು ಸ್ವಯಂ ಭೇಟಿ ಮತ್ತು ಶೇ. 20 ಸರ್ಕಾರದ ಸಂಸ್ಥೆ ಅಥವಾ ಪಂಚಾಯಿತಿಗಳಿಂದ ಮಾಹಿತಿ ದೊರೆಯುತ್ತದೆ ಎಂದು ತಿಳಿಸಿದ್ದಾರೆ. ಇವರಿಗೆ ಮಾಧ್ಯಮಗಳಿಂದ ದೊರೆತ ಮಾಹಿತಿಯು ಕೇವಲ ಶೇ.10 ರಷ್ಟಿರುವುದು ತಿಳಿದು ಬಂದಿದೆ.

**ಉದ್ದೇಶ 3:** ಪರಿಶಿಷ್ಟ ಜಾತಿಯ ಕೃಷಿ ಕೂಲಿ ಕಾರ್ಮಿಕ ಮಹಿಳೆಯರ ಮಾಧ್ಯಮ ಬಳಕೆಯ ಉದ್ದೇಶವನ್ನು ಗುರುತಿಸುವುದು.

ಮಾಧ್ಯಮಗಳು ಜನರಿಗೆ ಶಿಕ್ಷಣ, ಮಾಹಿತಿ, ಮನರಂಜನೆಯ ಉದ್ದೇಶವನ್ನು ಹೊಂದಿದೆ. ಸಂದರ್ಶಿತರು ಮಾಧ್ಯಮ ಬಳಕೆ ಮತ್ತು ಅವುಗಳ ಕಾರಣಗಳನ್ನು ತಿಳಿಯುವುದು ಮುಖ್ಯ.

**ಸ್ತಂಭ ರೇಖಾ ಚಿತ್ರ–1: ಸಂದರ್ಶಿತರ ಮಾಧ್ಯಮ ಬಳಕೆಯ ವಿವರ**



ಪರಿಶಿಷ್ಟ ಜಾತಿ ಕೃಷಿ ಕಾರ್ಮಿಕ 30 ಮಹಿಳೆಯರಲ್ಲಿ 28 ಮಂದಿ ಪತ್ರಿಕೆಗಳನ್ನು ಓದುವುದಿಲ್ಲ ಎಂದು, 2 ಮಂದಿ ಓದುವುದಾಗಿ ತಿಳಿಸಿದ್ದಾರೆ. ಹಾಗೆಯೇ, 30 ಮಂದಿಯಲ್ಲಿ ಹೆಚ್ಚಿನ (27) ಮಹಿಳೆಯರು ಟೆಲಿವಿಷನ್ ಬಳಕೆ ಮಾಡುತ್ತಿರುವುದಾಗಿ, ಉಳಿದ 3 ಮಂದಿ ಬಳಕೆ ಮಾಡುತ್ತಿಲ್ಲ ಎಂದು ತಿಳಿಸಿದ್ದಾರೆ. ಸಂದರ್ಶಿತರಲ್ಲಿ ಯಾರು ರೇಡಿಯೋ ಬಳಕೆಯನ್ನು ಮಾಡದಿರುವುದು ತಿಳಿದು ಬಂದಿದೆ.

**ಮಾಧ್ಯಮ ಬಳಕೆಯ ಕಾರಣಗಳು:**

**ಕೋಷ್ಟಕ–2:** ಸಂದರ್ಶಿತರಲ್ಲಿ ಮಾಧ್ಯಮ ಬಳಕೆಯ ಕಾರಣಗಳು

| ಕ್ರಮ ಸಂಖ್ಯೆ | ಮಾಧ್ಯಮ ಬಳಕೆಯ ಕಾರಣಗಳು | ಮಾಧ್ಯಮಗಳು | | |
|---|---|---|---|---|
| | | ಪತ್ರಿಕೆ | ಟೆಲಿವಿಷನ್ | ಇಂಟರ್‌ನೆಟ್ |
| 1 | ಕೇವಲ ಮಾಹಿತಿಗಾಗಿ | 2 (100%) | – | – |
| 2 | ಕೇವಲ ಮನರಂಜನೆಗಾಗಿ | – | 22 (81.48%) | – |
| 3 | ಮಾಹಿತಿ ಮತ್ತು ಮನರಂಜನೆಗಾಗಿ | – | 5 (18.52%) | 8 (100%) |
| | ಒಟ್ಟು | 2 (100%) | 27 (100%) | 8 (100%) |

ಸಂದರ್ಶಿತ ಪರಿಶಿಷ್ಟ ಜಾತಿ ಕೃಷಿ ಕಾರ್ಮಿಕ ಮಹಿಳೆಯರ ಮಾಧ್ಯಮ ಬಳಕೆಯನ್ನು ಸ್ತಂಭ ಚಿತ್ರ–1 ರಲ್ಲಿ ತಿಳಿಸಿದ್ದು, ಅದರಲ್ಲಿ ಮಾಧ್ಯಮವನ್ನು ಬಳಸುವವರ ಬಳಿ ಅವುಗಳ ಬಳಕೆಯ ಕಾರಣಗಳನ್ನು ತಿಳಿಯಲಾಗಿದ್ದು, ಅವುಗಳನ್ನು ಇಲ್ಲಿ ವಿವರಿಸಲಾಗಿದೆ. ಸಂದರ್ಶಿತ ಮಹಿಳೆಯರಲ್ಲಿ 2 ಮಂದಿ ಪತ್ರಿಕೆಗಳನ್ನು ಮಾಹಿತಿಗಾಗಿ ಓದುವುದಾಗಿ ತಿಳಿಸಿದ್ದಾರೆ. ಹಾಗೆಯೇ, ಟೆಲಿವಿಷನ್ ಬಳಕೆ ಮಾಡುತ್ತಿರುವವರಲ್ಲಿ ಶೇ. 81.48 ರಷ್ಟು ಮಂದಿ ಕೇವಲ ಮನರಂಜನೆಗಾಗಿ ಹಾಗೂ ಉಳಿದ ಶೇ. 18.52 ರಷ್ಟು ಮಂದಿ ಮಾಹಿತಿ ಮತ್ತು ಮನರಂಜನೆಗಾಗಿ ಬಳಸುವುದಾಗಿ ತಿಳಿಸಿದ್ದಾರೆ. ಇಂಟರ್‌ನೆಟ್ ಅನ್ನು ಮಾಹಿತಿ ಮತ್ತು ಮನರಂಜನೆಗಾಗಿಯೇ ಬಳಸುವುದಾಗಿ ತಿಳಿಸಿದ್ದಾರೆ.

**ಉದ್ದೇಶ 4:** ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯ ಕೃಷಿ ಕೂಲಿಕಾರ್ಮಿಕ ಮಹಿಳೆಯರ ಪ್ರಸ್ತುತ ಸ್ಥಿತಿ ತಿಳಿಯುವುದು.

ಸಂದರ್ಶಿತರಲ್ಲಿ, ಗ್ರಾಮೀಣ ಭಾಗದಲ್ಲಿ ಕೂಲಿಯಲ್ಲಿನ ತಾರತಮ್ಯ ಇನ್ನೂ ಇರುವುದಾಗಿ ತಿಳಿಸಿದ್ದಾರೆ. ಹಾಗೂ ಆಧುನಿಕ ಯಂತ್ರೋಪಕರಣಗಳು ಹಾಗೂ ತೋಟಗಳನ್ನು ಮಾಡುತ್ತಿರುವುದರಿಂದ ಮಹಿಳೆಯರು ಕೃಷಿ ಚಟುವಟಿಕೆಯಿಂದ ದೂರ ಉಳಿಯುವಂತೆ ಮಾಡಿರುವುದಾಗಿ ತಿಳಿಸಿದ್ದಾರೆ.

**ಫಲಿತಾಂಶ:**

ಸಂದರ್ಶನದಲ್ಲಿ ಮಾಹಿತಿ ಪಡೆದ 30 ಮಂದಿ ಮಹಿಳೆಯರಲ್ಲಿ ಮನೆಯ ಯಜಮಾನಿಕೆ ಶೇ. 70 ರಷ್ಟು ಒಡೆತನ ಗಂಡ ಮತ್ತು ಇತರರ ಕೈಯಲ್ಲಿ ಇರುವುದು ತಿಳಿದುಬಂದಿದೆ. ಜಮೀನು ಸ್ವಂತ ಹೊಂದಿರುವವರು 13 ಮಂದಿ ಇದ್ದರೂ, ಮಹಿಳೆಯ ಹೆಸರಿನಲ್ಲೇ ಜಮೀನು ಇರುವುದು ಕೇವಲ 3 ಮಂದಿಗೆ. ಇದು ಮನೆಯ ಯಜಮಾನಿಕೆ ಮತ್ತು ಜಮೀನಿನ ಒಡೆತನ ಎರಡರಲ್ಲೂ ಮಹಿಳೆ ಪುರುಷರಷ್ಟು ಸಮಬಲ ಪಡೆದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಿದೆ. ಆರ್ಥಿಕವಾಗಿ ಮತ್ತು ಯಜಮಾನಿಕೆ ಇದ್ದರೆ ತಮಗೆ ಇಷ್ಟ ಬಂದ ಮಾಧ್ಯಮ ಬಳಕೆಯ ಸ್ವಾತಂತ್ರ್ಯ ಹೊಂದಬಹುದು.

ಸಂದರ್ಶಿತರಲ್ಲಿ ಶೇ. 100 ರಷ್ಟು ಮಂದಿ ನಾವು ಕೃಷಿ ಸಂಘಟನೆಗಳಲ್ಲಿ ಭಾಗಿಯಾಗಿಲ್ಲ ಎಂದು ತಿಳಿಸಿದ್ದಾರೆ. ಇದು ಅವರು ಅಸಂಘಟಿತರಾಗಿರುವುದನ್ನು ತಿಳಿಸುತ್ತದೆ. ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರಿಗೆ ಸರ್ಕಾರದ ಯೋಜನೆಯ ಮಾಹಿತಿ ಅರಿವು ಶೇ.66.7 ಮಂದಿಗೆ ಇಲ್ಲದಿರುವುದು ಕಂಡುಬಂದಿದೆ. ಇದು ಮಹಿಳೆಯರಿಗೆ ಸರ್ಕಾರದ ಯೋಜನೆಗಳು ತಲುಪುತ್ತಿಲ್ಲ ಎಂಬುದು ಕಂಡುಬಂದಿದೆ. ಸರ್ಕಾರಿ ಸಂಸ್ಥೆಗಳು ಹಾಗೂ ಪಂಚಾಯಿತಿಗಳು ಕೃಷಿ ಸಂಬಂಧಿಸಿದ ಮಾಹಿತಿಗಳು ಕೃಷಿ ಮಹಿಳೆಯರಿಗೆ ತಲುಪುತ್ತಿಲ್ಲ ಎಂಬುದು ಕಾಣಬಹುದು. ನೆರೆಹೊರೆ ಅಥವಾ ಇತರೆ ಫಲಾನುಭವಿಗಳಿಂದ ಮಾಹಿತಿ ದೊರೆಯುತ್ತಿರುವುದಾಗಿ ತಿಳಿದುಬಂದಿದೆ.

ಮಾಹಿತಿದಾರರು ಹೆಚ್ಚಾಗಿ ಟೆಲಿವಿಷನ್ ವೀಕ್ಷಕರಾಗಿದ್ದಾರೆ. ಅನಕ್ಷರತೆ, ಪತ್ರಿಕೆಗಳು ಊರಿಗೆ ಬಾರದೆ ಇರುವುದು ಹಾಗೂ ಟೆಲಿವಿಷನ್‌ಗೆ ಪಾವತಿಸಿ ಪತ್ರಿಕೆಗಳಿಗೂ ಪಾವತಿಸುವುದು ದುಬಾರಿ ಎನಿಸುವುದರಿಂದ ಪತ್ರಿಕೆಗಳಿಂದ ದೂರ ಉಳಿದಿದ್ದಾರೆ. ರೇಡಿಯೋ ವೆಬ್ ಕಾಸ್ಟಿಂಗ್ ಪ್ರಾರಂಭಿಸಿದ್ದರೂ ಇದರ ಅರಿವು ಮತ್ತು ಬಳಕೆ ಇವರಲ್ಲಿ ಇಲ್ಲದಿರುವುದು ಕಂಡು ಬಂದಿದೆ.

ವರ್ಷದ ಎಲ್ಲಾ ದಿನಗಳಲ್ಲಿಯೂ ಕೃಷಿ ಚಟುವಟಿಕೆಯಲ್ಲಿ ಇವರು ತೊಡಗಿಕೊಂಡಿರುವುದಿಲ್ಲ. ಕಾರಣ, ಈ ಭಾಗದಲ್ಲಿ ಭತ್ತ ಬೆಳೆಯುವುದು ಹೆಚ್ಚಿರುವುದರಿಂದ ನಾಟಿ, ಕಳೆ, ಕೊಯ್ಲು ಸಮಯ ಬಿಟ್ಟರೆ, ಉಳಿದಂತೆ ಅಡಿಕೆ, ಇಟ್ಟಿಗೆ ಮತ್ತು ಉದ್ಯೋಗ ಖಾತ್ರಿ ಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಕೃಷಿ ಕಾರ್ಮಿಕ ಮಹಿಳೆಯ ಕೂಲಿಯಲ್ಲಿ ಸಮಾನ ಕೂಲಿ ಹಂಚಿಕೆಯಾಗುತ್ತಿಲ್ಲದಿರುವುದು ಕಂಡುಬಂದಿದೆ. ಸಂದರ್ಶಿತರು ಪತ್ರಿಕೆ, ಟೆಲಿವಿಷನ್ ಮತ್ತು ಇಂಟರ್‌ನೆಟ್ ಹೆಚ್ಚಾಗಿ ಮನೋರಂಜನಾ ಮೂಲವಾಗಿ ಬಳಸುತ್ತಿದ್ದಾರೆ. ಇದಕ್ಕೆ ಕಾರಣ ಅನಕ್ಷರತೆ ಮತ್ತು ದುಡಿದು ಬಂದ ಕೃಷಿಕರು ವಿಶ್ರಾಂತಿಯ ಸಮಯವನ್ನು ಕಳೆಯುತ್ತಿರುವುದು ಕಂಡುಬಂದಿದೆ.

**ಸಲಹೆ:**

» ಕೃಷಿ ಮಹಿಳೆಯರಿಗೆ ತರಬೇತಿಗಳನ್ನು ನೀಡುವುದು.

» ಮಾಧ್ಯಮಗಳಲ್ಲಿ ಕೃಷಿ ಸಂಬಂಧಿಸಿದ ಮಾಹಿತಿಯೆಡೆಗೆ ಒಲವು.

» ಕೃಷಿ ಭೂಮಿಯ ಒಡೆತನ ಮಹಿಳೆಯರಿಗೂ ನೀಡುವುದು.

» ಪಂಚಾಯಿತಿಗಳ ಪಕ್ಷಪಾತ ಧೋರಣೆ ನಿಲ್ಲಿಸಿ ಸರ್ವರಿಗೂ ಮಾಹಿತಿ ನೀಡುವುದು.

» ಕೃಷಿ ಇಲಾಖೆಗಳಿಂದ ಅರಿವಿನ ಕಾರ್ಯಕ್ರಮ ಏರ್ಪಡಿಸುವುದು.

**ಮಿತಿ:**

» ಅಧ್ಯಯನಕ್ಕೆ ಕೇವಲ 30 ಮಂದಿ ಸಂದರ್ಶಿತರನ್ನು ಆಯ್ಕೆಮಾಡಿಕೊಂಡಿದ್ದು.

» ಒಂದೇ ಸಮುದಾಯಕ್ಕೆ ಸಂಬಂಧಿಸಿದ ಮಾಹಿತಿ ಹೊರತು ಮೂರು ಸಮುದಾಯಗಳನ್ನು ತೆಗೆದುಕೊಂಡಿರುವುದು.

» ಮಾಹಿತಿಯ ಮೂಲಗಳ ಅಧ್ಯಯನವನ್ನು ಪರಿಗಣಿಸಿಲ್ಲದಿರುವುದು.

**ಉಪಸಂಹಾರ:**

ಕೃಷಿಯಲ್ಲಿ ಹೆಚ್ಚಿನ ಕೆಲಸ ಮಹಿಳೆಯರೇ ಮಾಡಿದರೂ, ಕೂಲಿಯಲ್ಲಿ ತಾರತಮ್ಯ ಇಂದಿಗೂ ಜೀವಂತವಾಗಿದೆ. ಹೆಚ್ಚಿನ ವಿದ್ಯಾಭ್ಯಾಸ ಮತ್ತು ಆರ್ಥಿಕ ಸಬಲೀಕರಣ ಇಲ್ಲದಿರುವುದರಿಂದ ಅನೇಕ ಸವಲತ್ತುಗಳು ಅಗತ್ಯವಿರುವವರಿಗೆ ತಲುಪಲು ತೊಡಕಾಗಿರುವುದು ತಿಳಿದುಬಂದಿದೆ. ಮಾಧ್ಯಮಗಳು ಕೇವಲ ಮನರಂಜನೆಯ ಮಾಧ್ಯಮವಾಗಿದೆ ಹೊರತು ಮಾಹಿತಿಯ ಮೂಲವಾಗಿ

ಪರಿಗಣಿಸುವುದಿಲ್ಲ. ಸಂದರ್ಶನದ ಸಮಯದಲ್ಲಿ ತಿಳಿದ ಮಾಹಿತಿ, ಸರ್ಕಾರದ ಯೋಜನೆಗಳು ಕೆಲವೇ ಮಂದಿಗಳು ಬಳಸಿಕೊಳ್ಳುತ್ತಿದ್ದಾರೆ, ಅದರ ಅರಿವು ನಮಗಿರುವುದಿಲ್ಲ. ರಾಜಕಾರಣಿಗಳೊಡನೆ ಆಪ್ತರಾಗಿರುವವರು ಅವರಿಗೆ ಮತ್ತು ಅವರ ಸಂಬಂಧಿಕರಿಗೆ ಮಾತ್ರ ವಿಷಯವನ್ನು ತಿಳಿಸುತ್ತಾರೆ ಹೊರತು ಎಲ್ಲಾ ಯೋಜನೆಗಳು ತಿಳಿಯುವುದಿಲ್ಲ ಎಂಬುದು ಕೃಷಿ ಮಹಿಳೆಯರ ಸಮಸ್ಯೆಯಾಗಿದೆ.

ಭತ್ತದ ಗದ್ದೆಗಳು ಅಡಿಕೆ ತೋಟಗಳಾಗುತ್ತಿದ್ದು, ಅವುಗಳಲ್ಲಿ ಮಹಿಳಾ ಕೃಷಿ ಕೂಲಿ ಕಾರ್ಮಿಕರಿಗೆ ಹೆಚ್ಚಿನ ಕೆಲಸ ದೊರಕದಿರುವುದು ಕಂಡುಬರುತ್ತಿದೆ. ಆಧುನಿಕ ಯಂತ್ರೋಪಕರಣಗಳು ಬಂದುದರ ಫಲವಾಗಿ ಮಹಿಳೆಯರು ಕೃಷಿಯನ್ನು ಕೂಲಿಗಾಗಿ ಆಶ್ರಯಿಸುವುದನ್ನು ಬಿಟ್ಟು ಬೇರೆ ಕೆಲಸದತ್ತ ಮುಖ ಮಾಡಿದ್ದಾರೆ.

ಕೃಷಿ ಚಟುವಟಿಕೆಗಳಲ್ಲಿ ಕೂಲಿಗಾಗಿ ದುಡಿಯುವುದರಲ್ಲಿ ಮಹಿಳೆಯರ ಪಾಲುದಾರಿಕೆ ಇದೆಯಾದರೂ, ಅದರ ಆದಾಯ ಮತ್ತು ಸಂಘಟನೆಗಳು, ಕಾರ್ಯಕ್ರಮಗಳಿಂದ ದೂರವೇ ಉಳಿದಿದ್ದಾರೆ. ಹಾಗೆಯೇ, ಗ್ರಾಮೀಣ ಜನರ ಹಾಗೂ ಕೃಷಿಕರ ಮಾಹಿತಿಯ ಮೂಲವಾಗಿ ಮಾಧ್ಯಮಗಳು ಪೂರಕವಾಗಿಲ್ಲ. ಹಾಗೆಯೇ ಸರ್ಕಾರದ ಸಂಸ್ಥೆಗಳು ಪೂರಕ ಮಾಹಿತಿ ಅಗತ್ಯವಿರುವವರಿಗೆ ನೀಡದಿರುವುದು ಕೃಷಿಕರ ಸಮಸ್ಯೆಯಾಗಿದೆ.

ಸ್ವಂತ ಜಮೀನು ಇಲ್ಲದಿರುವುದು, ಇದ್ದರೂ ಮಹಿಳೆಯ ಒಡೆತನ ಇಲ್ಲದಿರುವುದು, ಅನಕ್ಷರತೆಯ ಕಾರಣಗಳಿಂದ ಕೃಷಿ ಮಹಿಳೆಯರು ಸರ್ಕಾರದ ಯೋಜನೆಗಳನ್ನು ತಿಳಿದಿರುವುದಕ್ಕೆ ಕಾರಣವಿರಬಹುದು. ಇವುಗಳಿಂದ ದೂರ ಉಳಿದಿರುವುದಕ್ಕೆ ಅವರಿಗೆ ಕೃಷಿ ಸಂಘಟನೆಗಳಲ್ಲಿ ಭಾಗಿಯಾಗಲು ಸಾಧ್ಯವಾಗದಿರಬಹುದು. ಇತರೆ ಸಂಘಟನೆಗಳಂತೆ ರೈತ ಸಂಘಟನೆ ಕ್ರಿಯಾಶೀಲವಾಗಿದ್ದರೂ, ಮಹಿಳೆಯ ಪಾಲುದಾರಿಕೆ ಇಲ್ಲಿ ಕಡಿಮೆ ಎಂಬುದು ಕಂಡುಬಂದಿದೆ.

### ಪರಾಮರ್ಶನ ಗ್ರಂಥಗಳು:


1. Singariya M.R. (2014). Dr B R Ambedkar and women empowerment in India. In. Journal of research in humanities and social science. Volume 2, Issue 1. pp: 01–04
2. ವಿಜಯಾ ದಬ್ಬೆ. (1989). ಮಹಿಳಾ ಸಾಹಿತ್ಯ ಸಮಾಜ. ರಚನಾ ಪ್ರಕಾಶನ. ಮೈಸೂರು.
3. ಮಹೇಶಚಂದ್ರ ಗುರು. (2014). ಅಭಿವೃದ್ಧಿ ಸಂವಹನ ಮತ್ತು ಪತ್ರಿಕೋದ್ಯಮ. ಕರ್ನಾಟಕ ಮಾಧ್ಯಮ ಅಕಾಡೆಮಿ. ಬೆಂಗಳೂರು.
4. ಪವಿತ್ರ. (2019). ಮಹಿಳಾ ಸಬಲೀಕರಣ. ಸುಪ್ವಿ ಪಬ್ಲಿಕೇಶನ್ಸ್. ಶಿಕಾರಿಪುರ.
5. ಚಂದ್ರಶೇಖರ. (2015). ಗ್ರಾಮೀಣ ಮಹಿಳೆಯರ ಸಾಮರ್ಥ್ಯ ಹೆಚ್ಚಿಸುವಲ್ಲಿ ಮಹಿಳೆಯರ ಪಾತ್ರ. ಇನ್: ಗ್ರಾಮೀಣ ಅಭಿವೃದ್ಧಿ: ಸವಾಲುಗಳು ಮತ್ತು ಪರಿಹಾರಗಳು. ಮೊದಲ ಮುದ್ರಣ. ಸಂಪಾದಕರು ಶೇಖರ್ ಮತ್ತು ಸುನೀಲ್ ಕುಮಾರ್. ದೇಸಿ ಪುಸ್ತಕ ಪ್ರಕಾಶನ. ಬೆಂಗಳೂರು. ಪು.ಸ 13–19.
6. ಮುನಿಯಪ್ಪ ಮತ್ತು ಮರಿಸ್ವಾಮಿ (2012). ಸಮಗ್ರ ಗ್ರಾಮಾಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಮಾಧ್ಯಮಗಳ ಪಾತ್ರ. ಇನ್: ಮಹಿಳೆ, ಮಾಧ್ಯಮ ಮತ್ತು ರಂಗಭೂಮಿ, ಸಂಪಾದಕರು ವೆಂಕಟೇಶ್, ರೋಹಿಣಿ ಎಂಟರ್‌ಪ್ರೈಸಸ್. ಬೆಂಗಳೂರು.
7. Anita, G. & Murali Krishna Mohan, G. (2017). Coverage of women's issues by print media: A study of newspapers from 2010 to 2015. Global Journal of Research Analysis. Volume 6, Issue–9, September–2017



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.